**ದಿನಾಂಕ 25.06.2024**

**ಸಿ.ಸಿ ಸಂಖ್ಯೆಃ 1053/2018**

**(ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಸಾಕ್ಷಿ ನ್ಯಾಯಾಲಯದ ಮುಂದಿರುವ ಪ್ಲಾಸ್ಟಿಕ್ ಕವರಿನಲ್ಲಿನ 18 ಪೌಚುಗಳನ್ನು ನೋಡಿ ಗುರುತಿಸಿದ್ದು, ಒಟ್ಟಾಗಿ ಮುದ್ದೆಮಾಲು-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎನ್.ಎಂ, ವಕೀಲರಿಂದಃ**

ನನಗೆ ಬಾತ್ಮಿದಾರರು ನೀಡಿದ ಮಾಹಿತಿಯ ಮೇರೆಗೆ ಹಾಗೂ ಸ್ಥಳೀಯ ಸಿಬ್ಬಂದಿಗಳು ನೀಡಿದ ಮಾಹಿತಿಯ ಮೇರೆಗೆ ಸ್ಥಳದ ಕುರಿತು ತಿಳಿಯಿತು. ಆರೋಪಿತನ ಅಂಗಡಿಯ ಕುರಿತು ನನಗೆ ಬಾತ್ಮಿದಾರರು ಮಾಹಿತಿ ನೀಡಿರುತ್ತಾರೆ. ಆರೋಪಿತನಿಗೆ ಸೇರಿದ ಅಂಗಡಿ ಮನೆಗೆ ಹೊಂದಿಕೊಂಡಂತೆ ಮನೆಯ ಮುಂಭಾಗದಲ್ಲಿ ಇದೆ. ಆರೋಪಿತನಿಗೆ ಸೇರಿದ ಅಂಗಡಿಗೆ ಸಂಬಂಧಿಸಿದ ಪರವಾನಗಿಯನ್ನು ಹಾಗೂ ಅಂಗಡಿಯ ಜಾಗದ ಕುರಿತು ಅಸೆಸ್ ಮೆಂಟನ್ನು ಪಡೆದುಕೊಂಡಿಲ್ಲ. ನಾವು ಸ್ಥಳಕ್ಕೆ ಹೋದಾಗ ಆರೋಪಿ ಇದ್ದು, ಅಂಗಡಿಯ ಬಳಿ ಇಬ್ಬರು ಸಾರ್ವಜನಿಕರು ಇದ್ದು, ನಮ್ಮನ್ನು ನೋಡಿ ಸಾರ್ವಜನಿಕರು ಓಡಿಹೋದರು. ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳನ್ನು ಆರೋಪಿತನು ಅಂಗಡಿಯ ಹೊರಭಾಗದಲ್ಲಿ ಇಟ್ಟುಕೊಂಡಿದ್ದನು. ಆರೋಪಿತನು ಮದ್ಯದ ಪೌಚುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟಿದ್ದನು. ಮಹಜರಿನ ಕಾಲಕ್ಕೆ ಪ್ಲಾಸ್ಟಿಕ್ ಚೀಲವನ್ನು ಅಮಾನತ್ತುಪಡಿಸಿಕೊಂಡಿಲ್ಲ. ತನಿಖೆಗೆ ಅಗತ್ಯತೆ ಇಲ್ಲದ ಕಾರಣ ಪ್ಲಾಸ್ಟಿಕ್ ಚೀಲವನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ಸ್ಥಳದಲ್ಲಿ ನಿಪಿ-2 ರ ಮಹಜರನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಮಹಜರಿನ ಕಾಲಕ್ಕೆ ಚಾಸಾ-2 ಮತ್ತು 3 ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ರ ಮದ್ಯದ ಪೌಚುಗಳಿಗೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ನ್ನು ಆರೋಪಿತನ ಅಂಗಡಿಯಿಂದ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪನ್ನು ಎಸಗಿದ್ದಾಗ್ಯೂ ಠಾಣಾ ಅಂಕೆ ಸಂಖ್ಯೆಯ ಸಲುವಾಗಿ ಸುಳ್ಳು

ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರಿನ ಕಾಲಕ್ಕೆ ನನ್ನೊಂದಿಗೆ ಚಾಸಾ-2 ಮತ್ತು 3 ರವರು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಮಹಜರನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗಾಗಿ ಸ್ಥಳದ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ**
**ನಂಜನಗೂಡು**